Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಪಿ.ಸಿ.ಆರ್ ನಂ.300/2023

ಸಿ ಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ರೇಖಾ @ ಸುರೇಖಾ |
| ಗಂಡನ ಹೆಸರು | ಃ- | ಶಾಂತಗೌಡ ನಾಡಗೌಡರ |
| ವಯಸ್ಸು | ಃ- | 42 ವರ್ಷ |
| ಉದ್ಯೋಗ | ಃ- | ಒಕ್ಕಲುತನ |
| ವಾಸಸ್ಥಳ | ಃ- | ಖೈರವಾಡಗಿ, ಹಾ.ವ: ಲಿಂಗಸುಗೂರು |

ದಿ.05-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

***ಪ್ರತಿಜ್ಞಾ ವಿಧಿ ಹೇಳಿಕೆ ಶ್ರೀ ಎಮ್.ಕೆ ಪಿರ್ಯಾದಿ ಪರ ವಕೀಲರಿಂದ :-***

1ನೇ ಆರೋಪಿ ನನ್ನ ಗಂಡ, 2ನೆ ಆರೋಪಿ ನನ್ನ ಗಂಡನ 2ನೇ ಹೆಂಡತಿ. 3ನೇ ಆರೋಪಿ ನನ್ನ ಅತ್ತೆ, 4ನೇ ಆರೋಪಿ ನನ್ನ ನಾದಿನಿ. 5 ಮತ್ತು 6 ನೆ ಆರೋಫಿತರು 2ನೇ ಆರೋಪಿಯ ತಂದೆ-ತಾಯಿ, 7ನೇ ಆರೋಪಿ 2ನೇ ಆರೋಪಿಯ ತಮ್ಮ.

ದಿನಾಂಕ 29-04-2008 ರಂದು ನನ್ನ ಮದುವೆ 1ನೆ ಆರೋಪಿಯ ಜೊತೆ ಹಿಂದೂ ಸಂಪ್ರದಾಯದ ಪ್ರಕಾರ ಆಗಿರುತ್ತದೆ. ಮದುವೆಯ ಸಮಯದಲ್ಲಿ ಅವರಿಗೆ ನಾವು 6 ತೊಲೆ ಬಂಗಾರ ಕೊಟ್ಟಿರುತ್ತೇವೆ. ಮದುವೆಯಾದ ನಂತರ ನಾವು ಖೈರವಾಡಗಿಯಲ್ಲಿ 6 ತಿಂಗಳು ವಾಸವಿದ್ದೇವು. 1ನೆ ಆರೋಪಿ ನನಗೆ ತವರು ಮನೆಯಿಂದ ಹಣ ತರಬೇಕೆಂದು ಕಿರುಕುಳ ಕೊಟ್ಟ ಮನೆಯಿಂದ ಹೊರ ಹಾಕಿರುತ್ತಾರೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆದ್ದರಿಂದ ನಾನು 2011 ರಲ್ಲಿ ಮುದಗಲ್ ಪೋಲಿಸ್ ಠಾಣೆಯಲ್ಲಿ ದೂರು ಸಲ್ಲಿಸಿರುತ್ತೇನೆ. ಈಗ ನಾನು ಬಾಡಿಗೆ ಮನೆ ತೆಗೆದುಕೊಂಡು ಲಿಂಗಸುಗೂರಿನಲ್ಲಿ ಇರುತ್ತೇನೆ.

2. ನಾನು ಈಗ ಒಂದು ವರ್ಷದ ಹಿಂದೆ ಖೈರವಾಡಗಿಗೆ ಹೋಗಿರುತ್ತೇನೆ. ಆಗ 1ನೇ ಆರೋಪಿ ನಾನು 2ನೇ ಮದುವೆ ಮಾಡಿಕೊಂಡಿದ್ದೇನೆ. ನೀನು ಏನು ಮಾಡಿಕೊಳ್ಳುತ್ತೀಯಾ ಎಂದು ಹೇಳಿರುತ್ತಾರೆ. ನಾನು ಜೀವನಾಂಶ ಕೋರಿ ನ್ಯಾಯಾಲಯದಲ್ಲಿ ಕೇಸು ಹಾಕಿರುತ್ತೇನೆ. 2ನೇ ಆರೋಪಿತಳ ಮದುವೆಯನ್ನು 1ನೇ ಆರೋಪಿಯ ಜೊತೆ ಎಲ್ಲ ಆರೋಪಿತರು ಸೇರಿ ಛತ್ರದಲ್ಲಿ ಮಾತುಕತೆ ಮಾಡಿ ಹನುಮಗುಡ್ಡದ ಬಸವೇಶ್ವರ ದೇವಸ್ಥಾನದಲ್ಲಿ ಮದುವೆ

ಮಾಡಿರುತ್ತಾರೆ. ದಿನಾಂಕ 30-08-2023 ರಂದು ಎಲ್ಲರೂ ಸೇರಿ ಮದುವೆ ಮಾಡಿರುತ್ತಾರೆ. ಸದರಿ ಮದುವೆಯ ವಿಚಾರವನ್ನು ಶ್ರೀಕಾಂತ ಮತ್ತು ಅಮರೇಶರವರು ನನಗೆ ತಿಳಿಸಿರುತ್ತಾರೆ.

೩. ಸದರಿ ವಿಚಾರ ಕೇಳಿದ ನಂತರ ನಾನು ಎಲ್ಲ ಆರೋಪಿತರ ವಿರುದ್ಧ ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ.

ಮುಂದುವರೆದ ಪ್ರತಿಜ್ಞಾ ವಿಧಿ ಹೇಳಿಕೆಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.